ಮಂಡಳಿಗೆ ಬೇಕಾದ ಹಣ ಮತ್ತು ಉಪಕರಣಗಳ ದೊರಕುವಿಕೆಯನ್ನು ಅವಲಂಬಿಸಿದೆ. ಆರ್.ಇ.ಸಿ. ಯೋಜನೆಯಡಿಯಲ್ಲಿ ತಾಂಡಗಳಿಗೆಂದೇ ಪ್ರತ್ಯೇಕ ಯೋಜನೆ ಇಲ್ಲದೇ ಇರುವುದರಿಂದ ಮಂಡಳಿಯ ವಿದ್ಯುದ್ದೀಕರಣ ಯೋಜನೆಯಲ್ಲಿ ಮಂಡಳಿಯ ನಿಯಮಗಳನ್ನು ಪಾಲಿಸುವ ತಾಂಡಗಳಿಗೆ ಹಂತಹಂತವಾಗಿ ಮಂಡಳಿಯ ವಿದ್ಯುಚ್ಛಕ್ತಿಯನ್ನು ಒದಗಿಸುವುದು, ಈ ಕಾರ್ಯ ಮಂಡಳಿಗೆ ದೊರಕುವ ಹಣ ಮತ್ತು ಸಾಮಗ್ರಿಗಳನ್ನು ಅವಲಂಬಿಸಿದೆ. ಗ್ರಾಮಗಳು ತಾಂಡಗಳು ಪಾಳ್ಯಗಳು ಮಂಡಳಿಯ ಗ್ರಾಮೀಣ ಯೋಜನೆಯಲ್ಲಿ ಸೇರಬೇಕಾದರೆ ಪಾಲಿಸಬೇಕಾದ ನಿಯಮಗಳು ಈ ರೀತಿ ಇವೆ.—

1. ಇವು ಮಂಡಳಿಯ ಹೈಟೆನ್ಷನ್ ಲೈನುಗಳಿಂದ 1.5 ಕಿ.ಮಿ. ಆಂತರದೊಳಗೆ ಇರಬೇಕು.

2. ವರ್ಷಕ್ಕೆ ಮಂಡಳಿಗೆ ಕನಿಷ್ಟ ಶೇ. 5ರಷ್ಟು ಮಲೆನಾಡು ಪ್ರದೇಶದಲ್ಲೂ ಶೇ. 7ರಷ್ಟು ಮೈದಾನ ಪ್ರದೇಶದಲ್ಲೂ ಸರಬರಾಜಿಗೆ ತಗಲಿದ ಹಣದ ಮೇಲೆ ಆದಾಯ ಬರುವಂತೆ ಇರಬೇಕು.

3. ಇವು ರಾಜ್ಯ ಸರ್ಕಾರದ ಅನುಮೋದನೆ ಪಡೆದಿರಬೇಕು. ಆದರೆ ಎಲ್ಲಾ ಗ್ರಾಮಗಳು ಹಾಗೂ ತಾಂಡಾಗಳು ಇವುಗಳಿಗೆ 1985-86ರ ಡಿಸಂಬರ್ ಒಳಗೆ ಮುಗಿಸಿ ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ.—7ನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದ ಎಲ್ಲ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಒದಗಿಸುವ ಗುರಿಯನ್ನು ಹೊಂದಿದ್ದು, ಅದರೊಳಗೆ ನಮ್ಮದೂ ಮುಗಿಯಬಹುದು ಎನ್ನುತಕ್ಕಂತಹ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಹೇಳುವುದೇನೆಂದರೆ ಇದಕ್ಕೋಸ್ಕರ ಸುಮಾರು 2 ವರ್ಷಗಳಿಂದ ಪ್ರಯತ್ನ ಪಟ್ಟು ಆಲ್ಲಿರತಕ್ಕ ಅಧಿಕಾರಿಗಳಿಗೆ ಪತ್ರ ಬರೆದು ನಂತರ ಆರ್.ಇ.ಸಿ. ಛೇರ್ಮನ್‌ರವರನ್ನು ಭೇಟಿಯಾಗಿ ಅವರಿಗೂಕೂಡ ಬರೆದಿದ್ದೇನೆ. ಆದರೆ ಇಲ್ಲಿಯ ವರೆವಿಗೆ 27 ಹಳ್ಳಿಗಳು ಉಳಿದಿವೆ. ಅದೇ 68 ತಾಂಡಾಗಳು ಉಳಿದಿವೆ. ಅದರ ಬಗ್ಗೆ ನಮ್ಮ ಲೋಕಲ್ ನಲ್ಲಿರತಕ್ಕ ಅಧಿಕಾರಿಗಳು ಆಸಕ್ತಿ ವಹಿಸುತ್ತಿಲ್ಲ. ಇಲ್ಲಿ ಆರ್.ಇ.ಸಿ.ನವರು ಬಂದರೆ ಅವರಿಗೆ ಸರ್ವೇ ಮಾಡುವುದಕ್ಕೆ ಬಿಡುತ್ತಿಲ್ಲ. ಸಹಕಾರ ಕೊಡುತ್ತಿಲ್ಲ. ಅದಕ್ಕೆ ತಾವು ತಕ್ಷಣ ಆದೇಶವನ್ನು ಕೊಟ್ಟು ಈ 27 ಹಳ್ಳಿಗಳು ಹಾಗೂ 68 ತಾಂಡಗಳಿಗೆ 1985-86ರ ಒಳಗೆ ಮಾಡಿಕೊಡುವುದಕ್ಕೆ ಸೂಕ್ತ ಆದೇಶವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡುತ್ತೀರೋ ಅಥವಾ ಇಲ್ಲವೋ ಅದನ್ನು ತಿಳಿಸಿ. ತಾವು ಸುಮಾರು 104 ಗ್ರಾಮಗಳಿಗೆ ವಿದ್ಯುತ್ ಸರಬರಾಜಾಗಿದೆ ಎಂಬುದಾಗಿ ಹೇಳಿದ್ದೀರಿ, ವಿದ್ಯುತ್ ಪೂರೈಕೆಯನ್ನು ಸರಿಯಾಗಿ ವ್ಯವಸ್ಥೆ ಮಾಡಬೇಕಾದರೆ ಅಲ್ಲಿರತಕ್ಕ ಸರ್ವೀಸ್ ಸ್ಟೇಷನ್ ಕೆಲಸವನ್ನು ಮೊದಲು ಮುಗಿಸಬೇಕು. ಕಳೆದ 5 ವರ್ಷಗಳ ಹಿಂದೆಯೇ ಇದು ಪ್ರಾರಂಭವಾಗಿದ್ದರೂ ಇನ್ನು ಅದು ಪೂರ್ಣಗೊಂಡಿಲ್ಲ. ಈ ಮಧ್ಯೆದಲ್ಲಿ ಎರಡು ವರ್ಷಗಳಿಂದ ಕೆಲಸ ನಿಂತು ಹೋಗಿದೆ. ಅಲ್ಲಿರತಕ್ಕ ಎಲ್ಲ ಸಿಬ್ಬಂದಿಯನ್ನು ಹುಮ್ನಾಬಾದ್‌ಗೆ ಹಾಕಿದ್ದಾರೆ. ಆದ್ದರಿಂದ ಈ ಕೆಲಸವನ್ನೂ ತೆಗೆದುಕೊಳ್ಳುತ್ತೀರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ಪರಿಶೀಲನೆ ಮಾಡಿ ಕ್ರಮ ಗೆದುಕೊಳ್ಳುತ್ತೇವೆಂದು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮ್ಮ ಬಾಯಿಂದ ಉತ್ತರ ಪಡೆಯುವುದಾದರೆ ನಾವು ಮಂತ್ರಿಗಳನ್ನು ಏಕೆ ಪ್ರಶ್ನೆ ಕೇಳಬೇಕು ?

ಅಧ್ಯಕ್ಷರು.—ಅವಕ್ಕೆ ಅವರು ಉತ್ತರ ಹೇಳುತ್ತಾರೆ, ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಬಗ್ಗೆ ತಾವು ಅಷ್ಟು ಕನಿಕರ ತೋರುವುದು ಬೇಡ. ಅವರು ಏನು ಹೇಳುತ್ತಾರೋ ಕೇಳೋಣ.

ಅಧ್ಯಕ್ಷರು.—ನನಗೆ ಅವರ ಬಗ್ಗೆ ಮಾತ್ರವಲ್ಲ ; ಎಲ್ಲರ ಬಗ್ಗೆಯೂ ಕನಿಕರ ಇದೆ.

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಸದಸ್ಯರು ಹೇಳಿದ ಎಲ್ಲಾ ಹಿಂದುಳಿದ ಪ್ರದೇಶಗಳಿಗೂ ಆದಷ್ಟು ಬೇಗ ಅಂದರೆ 85-86ರಲ್ಲಿ ಪೂರ್ಣವಾಗಿ ವಿದ್ಯುತ್ತನ್ನು ಒದಗಿಸಿಕೊಡುತ್ತೇನೆಂದು ಹೇಳ ಬಯಸುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಲಕ್ಷ್ಮೀಸಾಗರ್.—ಸದರಿ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಉತ್ತರಗಳ ಪಟ್ಟಿಯನ್ನು ಮಂಡಿಸಲಾಯಿತು.

ವಿಷಯ.—ರೈತರ ಸುಸ್ತಿ ಸಹಕಾರ ಸಾಲಗಳಿಗೆ ಹರಾಜಾದ ಭೂಮಿಯನ್ನು ಸರ್ಕಾದವರು ಖರೀದಿ ಮಾಡಿರುವ ಬಗ್ಗೆ.

ಪ್ರ. ಸಂಖ್ಯೆ 33 (205) **ಶ್ರೀ ಸಿ. ಎಂ. ರೇವಣ್ಣ ಸಿದ್ದಪ್ಪ** (ಸಿರಗುಪ್ಪ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರೈತರ ಸುಸ್ತಿ ಸಹಕಾರ ಸಾಲಗಳಿಗೆ ಹರಾಜಾದ ಭೂಮಿಯೆನ್ನು ಸರ್ಕಾರದವರು ಖರೀದಿ ಮಾಡಿರುವ ನಿದರ್ಶನಗಳೆಷ್ಟು ? ಮತ್ತು ಅದರ ಪೊತ್ತ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು) ;

ಆ) ಸಹಕಾರ ಸಾಲಗಳ ಬಡ್ಡಿ ರಿಯಾಯಿತಿಯ ನಂತರ ರೈತ ಅಸಲನ್ನು ಬ್ಯಾಂಕಿಗೆ ಕಟ್ಟಿದ ಮೇಲೆ ಆ ಜಮೀನನ್ನು ರೈತನಿಗೆ ಪುನ: ಕೊಡುವ ಅಧಿಕಾರ ಯಾರಿಗಿದೆ ;

ಇ) ಈ ರೀತಿ ಜಮೀನನ್ನು ರೈತ ಸರ್ಕಾರದಿಂದ ಪುನ: ಸ್ವಾಧೀನ ಪಡಿಸಿ ಕೊಂಡಿರುವ ನಿದರ್ಶನಗಳೆಷ್ಟು ;

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ವಿವರಗಳನ್ನು ತಃಖ್ತೆ — 1 ರಲ್ಲಿ ನೀಡಲಾಗಿದೆ.

ಆ) ಸಹಕಾರ ಸುಸ್ತಿ ಸಾಲಗಳ ಬಡ್ಡಿ ರಿಯಾಯಿತಿ ಯೋಜನೆಯು ಈಗ ಅನುಷ್ಠಾನದಲ್ಲಿಲ್ಲ. ಹಲವು ಪರತ್ತು ಮತ್ತು ನಿಗದಿತ ವೇಳೆಗೆ ಅನುಗುಣವಾಗಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪುನ: ಜಗರ್ಾವಣೆ ಮಾಡುವ ಅಧಿಕಾರವಿರುತ್ತದೆ.

ಇ) 132.

Statement showing the details required
Under sub-question (a).

District	No. of cases	Amout (in Rupees)
1) Bangalore (City)	Nil	Nil
2) Bangalore (Rural)	Nil	Nil
3) Chitradurga	Nil	Nil
4) Shimoga	18	1,81,946.23
5) Kolar	30	2,31,933.00
6) Tumkur	3	66,038.00
7) Mysore	23	1,87,636.71
8) South Kanara	Nil	Nil
9) Hassan	34	2,68,368.00
10) Kodagu	Nil	Nil
11) Chikamagalur	4	50,707.00
12) Mandya	Nill	Nil
13) Belgaum	40	3,26,818,48
14) Dharwad	14	1,33,869,25
15 North Kanara	Nill	Nil
16) Bijapur	87	7,92,664,36
17) Gulbarga	130	10,14,709.00
18) Bidar	54	4,74,267.44
19) Bellary	286	21,99,543.73
20) Raichur	277	21,20,675.50
	1000	10,49,216.70

ವಿಷಯ.—ಕೊಳ್ಳೆಗಾಲ ತಾಲ್ಲೂಕು ವ್ಯವಸಾಯ ಉತ್ಪನ್ನಗಳ ಮಾರಾಟ ಸಹಕಾರ ಸಂಘ

ಪ್ರ. ಸಂಖ್ಯೆ 60 ಶ್ರೀ ಜಿ. ರಾಜುಗೌಡ.—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ;